ಮೈಸೂರ ಗೆಜೆಟ್ಟ

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ। 8, ಸ್ನ- 1884.

ಸೂಚನೆ- ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳವರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೈಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ೫ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್ ಕೋಯವರು ಬಡ್ಡೀದುನ್ನು ಪಾವತೀ ಮಾಡುವ ಬಗ್ಗೆ ಅವ ಇವರ ಮೈಸೂರು ಗವರ್ನಮೆಂಟಿನವರು ಯೀರ್ಪಾಡು ಮಾಡಿಕೊಂಡಿರುವರೆಂದು ಲಂಡನ್ನಲ್ಲಿ ತಮ್ಮ ಡಿಬೆಂಚರ್‌ದಾರರಿಗೆ ಬಡ್ಡೀಯನ್ನು ಕೊಳ್ಳಲಿಕ್ಕೆ ಯಿಷ್ಟಪ್ಪುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇನ್ಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ರಾಫ್ಟ್‌ಲಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ಆಗುಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜಿ ಮಾಡಲ್ಪಡಲಾರದು.

ಹೆಚ್. ಹಡಿಸರ್ಟ್,
ಕಾಂಪ್ಟ್ರೋಲರ್.

ನಂದೀದುರ್ಗ ಡಿವಿಜರ್ಜ್.

ನಂದೀದುರ್ಗ ಡಿವೀಜರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಆರ್ಜೀ ನಂಬರ್ 56.

ಮೃತಪಟ್ಟ ಕನಕಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಲಕ್ಷ್ಮಮ್ಮ, ಮೃತಪಟ್ಟ ಸದರೀ ಕನಕಮ್ಮನಿಗೆ ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ವಿಧ್ವೀ ಆದ ಲಕ್ಷ್ಮಮ್ಮನು, ಡಿಟೋ ವಾಸಸ್ಥಳಾಗಿ ಮೃತಪಟ್ಟ ಕನಕಮ್ಮನ ಜೀವದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮ್ಮನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕನಕಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 89.

ಮೃತಪಟ್ಟ ಸುಬ್ಬಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಸುಬ್ಬಮ್ಮ, ಮೃತಪಟ್ಟ ಸದರೀ ಸುಬ್ಬಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ದೇವನಹಳ್ಳಿ ಸ್ಥಳದ ಸುಬ್ಬಮ್ಮನು ಡಿಟೋ ವಾಸಸ್ಥರಾಗಿ ಮೃತಪಟ್ಟ ಸುಬ್ಬಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸುಬ್ಬಮ್ಮನ ಅರ್ಜೀಯನ್ನು 1884ನೇ ಇಸವಿ ಮೇ ತಿಂಗಳು ತಾರೀಖು 28ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚಿಟ್ಟಿ,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ತಾಲ್ಲೂಕು ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಯಲಹಂಕದ ಕಸಬೆಯಲ್ಲಿರುವ ಪಳೇ ತಾಲ್ಲೂಕು ಕಚ್ಚೇರಿಯನ್ನು ಹರಾಜು ಮಾಡಬಹುದೆಂದು ದೀವಾ ಸಾಹೆಬರವರ ಸಾಂಗರ್ಷ ಪ್ರೊಸೀಡಿಂಗ್ಸ್ ಅನುಸರಿಸಿ ಡಿಸ್ಟ್ರಿಕ್ಟ್ ಹುಜೂರಿಂದ ವಾಹೇ ಗುಜಸ್ತಾ 21ನೇ ಮಕ್ತುಂ 932ನೇ ನಂಬರ್ ಹುಕ್ಕುಂ ಸಾದರಾಗಿರುವ ಪ್ರಕಾರ ಹರಾಜು ಆಗತಕ್ಕ ಕಚ್ಚೇರಿ ನಿವೇಶನದ ಚಕ್ಕ ಬಂದಿ ತಪಸೀಲ್.

1 ಪೂರ್ವಕ್ಕೆ ಮುನಕೆಟ್ಟು ಹರಾಜಿನಲ್ಲಿ ಪಡದ ಖಾಲೀ ಜಮೀನು ಮತ್ತು ಸರಕಾರದ ಖಾಲೀ ಜಮೀನು ಸಹಾ. 1 ಉತ್ತರಕ್ಕೆ ಹೊನ್ನಪ್ಪನ ಮನೆ.

1 ಪಶ್ಚಿಮಕ್ಕೆ ಕೋಟೇ ವಳಕ್ಕೆ ಹೋಗುವದಾರಿ, 1 ದಕ್ಷಿಣಕ್ಕೆ ಕೋಟೇವಳಕ್ಕೆ ಹೋಗುವ ದಾರಿ.

ಈ ಚತುರ್ಮರ್ಧ್ಯೆ ಇರುವ ಕಟ್ಟಡದ ಕಟ್ಟಡ ಅಂಕಣ 65 ಮಧ್ಯೆ ತೊಟ್ಟು ಖಾಲೀ ಜಮೀನು ಅಂಕಣ 2 ಸಹ ಬಾಲತೀ ಇಸವೀ ಏಪ್ರೆಲ್ 7ನೇ ತಾರೀಖು ಸೋಮವಾರ ಹಗಲು 12 ಘಂಟೆ ಲಾಗಾಯತು 4 ಘಂಟೆ ವರಿವಿಗೂ ಸದರೀ ಕಟ್ಟಡದ ಬಳಿ ತಾಲ್ಲೂಕು ಆಫಿನರವರಿಂದ ಹರಾಜು ಹಾಕಲ್ಪಡುತ್ತೆ. ಯಿಪ್ಪತ್ತುವೆಳ್ಳ ಜನಗಳು ಸದರೀ ಟೈಮಿಗೆ ಸರಿಯಾಗಿ ಕಟ್ಟಡದ ಬಳಿ ಹಾಜರ್ ಯಿದ್ದು ಧಾರಾಳವಾಗಿ ಚಡ ಸವಾಲ್ ಮಾಡಬಹುದು. ಹರಾಜ್ ಖೈದಾದ ನಂತರ ಮಾಡತಕ್ಕ ಸವಾಲ್‌ಗಳು ಅಂಗೀಕರಿಸುವದಿಲ್ಲ. ಹರಾಜಿನಲ್ಲಿ ಅಖೈರ್ ಸವಾಲ್ ನಿಂತ ದರಖಾಸ್ತುದಾರನು 4ರಲ್ಲಿ ವೊಂದು ಹಿಸ್ಸೆ ಮೊಬಲಗು ತಕ್ಷಣ ಹಾಜರ್ ಮಾಡಿ ರೇತಿ ಪಡಿಯಬೇಕು. ಬಾಕೀ ಮೂರು ಹಿಸ್ಸೇ ಮೊಬಲಗಿಗೆ ಖಾತರ ಜಾಮೀನು ಕೊಡಬೇಕು. ಈ ಹರಾಜು ಮಂಜೂರಾಯು ಡೆಪ್ಯುಟಿ ಕಮ್ಮಿಷನ್ನರ್ ಸಾಹೆಬರವರ, ವ ದೀವಾ ಸಾಹೆಬರವರ ಮಂಜೂರಿಗೆ ವಳಪಟ್ಟದ್ದಾಗಿದೆ. ಮಂಜೂರಿ ಹುಕ್ಕುಂ ಬಂದು ಬಾಕೀ ಮೊಬಲಗಿಗೆ ತಗಾದೆ ಮಾಡದ ಪೊಡನೆಯೇ ಪೂರಾ ಮೊಬಲಗು ದರಖಾಸ್ತುದಾರನಾಗಲಿ ಜಾಮೀರ್ದಾರನಾಗಲಿ ಕೊಟ್ಟು ರೇದಿ ಪಡಿಯಬೇಕು. ಹಾಗೆ ಮೊಬಲಗು ಕೊಡದೆ ಯಿದ್ದರೆ ದುಸರಾ ಹರಾಜು ಆಗುವದರಲ್ಲಿ ಕಮ್ಮಿ ಬೀಳತಕ್ಕ ಮೊಬಲಗು ಅವ್ವಲ್ ದರಖಾಸ್ತುದಾರನು ಜಾಮೀನುದಾರನು ಸಹ ತೆರಬೇಕಾಗಿರುತ್ತೆ. ಈ ಮೊಬಲಗು ಇವರ ಚರ ಯಾ ಸ್ಥಿರಸ್ವತ್ತುಗಳ ಮೇಲೆ ವಿಲೇ ಮಾಡಲ್ಪಡುತ್ತೆ. ಏನಾಯಿ ಡಿಪಾಜಿಟ್ ಯಿಟ್ಟು ಯಿರುವ ಹಣವು ಸರಕಾರಕ್ಕೆ ದಂಡವಾಗಿ ಸೇರಿಸಿಕ್ಕೊಳ್ಳಲಾಧೀತು.

ತಾರೀಖು 16ನೇ ಮಾಹೇ ಫಿಬ್ರವರೀ ಸ್ನ 1884.

ಡಿ. ಶಾಮರಾವ್,
ಆಮಲ್‌ದಾರ್.